# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1418 (1647) |
| ಮಾನ್ಯ ಸದಸ್ಯರ ಹೆಸರು | ಡಾ|| ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ), |
| ಉತ್ತರಿಸುವ ದಿನಾಂಕ | 18-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ವಿವಿಧ ಹುದ್ದೆಗಳು ಎಷ್ಟು, (ಹುದ್ದೆವಾರು ಮುಂಬಡ್ತಿ ಹಾಗೂ ನೇರ ನೇಮಕಾತಿ ಹುದ್ದೆ ಇವುಗಳ ಪ್ರತ್ಯೇಕ ಮಾಹಿತಿ ಒದಗಿಸುವುದು) | ಅನುಬಂಧ-1 ರಲ್ಲಿ ನೀಡಿದೆ. |
| ಆ) | ಮೇಲ್ಕಂಡ ವಿವಿಧ ಹುದ್ದೆಗಳು ಯಾವ ಅವಧಿಯಿಂದ ಖಾಲಿ ಇರುತ್ತವೆ; (ಕಾರಣ ಸಹಿತ ಹುದ್ದೆವಾರು ಪ್ರತ್ಯೇಕ ಮಾಹಿತಿ ನೀಡುವುದು) | ಅನುಬಂಧ-2 ರಲ್ಲಿ ನೀಡಿದೆ. |
| ಇ) | ಕಳೆದ ಯಾವ ಅವಧಿಯಲ್ಲಿ ವಿವಿಧ ಶ್ರೇಣಿಯಲ್ಲಿನ ಮುಂಬಡ್ತಿ ಹುದ್ದೆಗಳು ಖಾಲಿ ಇರುತ್ತವೆ; ಮುಂಬಡ್ತಿ ನೀಡಿಕೆಯಲ್ಲಿ ಇರುವ ಕಾರಣಗಳು ಏನು; ಈ ನಿಟ್ಟಿನಲ್ಲಿ ಕೈಗೊಂಡ ಕ್ರಮ ಏನು: (ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು) | ಅನುಬಂಧ-3 ರಲ್ಲಿ ನೀಡಿದೆ. |
| ಈ) | ಮುಂಬಡ್ತಿ ನೀಡಿಕೆಯಲ್ಲಿ ವಿಳಂಬ ಕುರಿತಾಗಿ 1985 ರಿಂದಲೇ ಸರ್ಕಾರದ ಸ್ಪಷ್ಟ ಮಾರ್ಗಸೂಚಿ ಇದ್ದರೂ ಮತ್ತು ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಕನಿಷ್ಠ ಆರು ತಿಂಗಳಿಗೊಮ್ಮೆ ಇಲಾಖಾ ಮುಂಬಡ್ತಿ ಸಮಿತಿಯು ಸಭೆ ನಡೆಸಬೇಕೆಂಬ ಹಿಂದಿನ ಸುತ್ತೋಲೆಗಳು ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/380/ಸೇನೆನೀ/2025, ದಿನಾಂಕ: 12-02-2026 ರನ್ನು ಕಡ್ಡಾಯವಾಗಿ ಅನುಷ್ಠಾನಗೊಸುವ ನಿಟ್ಟಿನಲ್ಲಿ ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ ಅರ್ಹ ಜೇಷ್ಠತೆ ನೌಕರರು/ಅಧಿಕಾರಿಗಳ ಮುಂಬಡ್ತಿ ವಿಷಯವಾಗಿ ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ವಿವರ ಒದಗಿಸುವುದು? | ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆಯಲ್ಲಿ ಪ್ರಸಕ್ತ 2025-26ನೇ ಸಾಲಿನವರೆಗೆ ವಿವಿಧ ಶ್ರೇಣಿಗಳ ಜೇಷ್ಠತಾ ಪಟ್ಟಿಗಳನ್ನು ಪ್ರಕಟಪಡಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸಿದ ಕೂಡಲೇ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/380/ಸೇನೆನೀ/2025, ದಿನಾಂಕ:12.02.2026 ರನ್ವಯ ಕಾಲ ಕಾಲಕ್ಕೆ ಕ್ರಮ ಕೈಗೊಳ್ಳಲಾಗುವುದು. |

**ಕಂಇ/89/ಎಂಎನ್ಎಸ್ಎ/2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅನುಬಂಧ-1

| ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳು | | | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು | | | ಖಾಲಿ ಇರುವ ಹುದ್ದೆಗಳು | | |
|---|---|---|---|---|---|---|---|---|---|
| | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು |
| **ಗ್ರೂಪ್ 'ಎ'** | | | | | | | | | |
| ನೋಂದಣಿ ಉಪ ಮಹಾಪರಿವೀಕ್ಷಕರು | - | 05 | 05 | - | 05 | 05 | - | - | - |
| ಜಿಲ್ಲಾ ನೋಂದಣಾಧಿಕಾರಿಗಳು | - | 39 | 39 | - | 28 | 28 | - | 11 | 11 |
| ಕೇಂದ್ರಸ್ಥಾನ ಸಹಾಯಕರು | - | 33 | 33 | - | 20 | 20 | - | 13 | 13 |
| **ಗ್ರೂಪ್ 'ಬಿ'** | | | | | | | | | |
| ಹಿರಿಯ ಉಪ ನೋಂದಣಾಧಿಕಾರಿಗಳು | - | 108 | 108 | - | 85 | 85 | - | 23 | 23 |
| **ಗ್ರೂಪ್ 'ಸಿ'** | | | | | | | | | |
| ಉಪ ನೋಂದಣಾಧಿಕಾರಿಗಳು | 92 | 94 | 186 | 66 | 82 | 148 | 26 | 12 | 38 |
| ಪ್ರಥಮ ದರ್ಜೆ ಸಹಾಯಕರು | 124 | 124 | 248 | 88 | 86 | 174 | 36 | 38 | 74 |
| ದ್ವಿತೀಯ ದರ್ಜೆ ಸಹಾಯಕರು | 339 | 167 | 506 | 198 | 29 | 227 | 141 | 138 | 279 |

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು.

## ಅನುಬಂಧ-2

<table>
<tr><th>ಹುದ್ದೆಯ ಹೆಸರು</th><th>ಹುದ್ದೆಗಳು ಖಾಲಿ ಇರುವ ಅವಧಿಯ ಮಾಹಿತಿ</th></tr>
<tr><td>ಜಿಲ್ಲಾನೋಂದಣಾಧಿಕಾರಿಗಳು</td><td>2025 ನೇ ಸಾಲಿನಿಂದ ಅಧಿಕಾರಿಗಳ ನಿವೃತ್ತಿಯ ಕಾರಣಗಳಿಂದ ಹುದ್ದೆಗಳು ಖಾಲಿ ಇರುತ್ತವೆ.</td></tr>
<tr><td>ಕೇಂದ್ರಸ್ಥಾನ ಸಹಾಯಕರು</td><td>2025 ನೇ ಸಾಲಿನಿಂದ ಅಧಿಕಾರಿಗಳ ಪದೋನ್ನತಿ, ನಿವೃತ್ತಿಯ ಕಾರಣಗಳಿಂದ ಹುದ್ದೆಗಳು ಖಾಲಿ ಇರುತ್ತವೆ.</td></tr>
<tr><td>ಹಿರಿಯ ಉಪನೋಂದಣಾಧಿಕಾರಿಗಳು</td><td>2024 ನೇ ಸಾಲಿನಿಂದ ಅಧಿಕಾರಿಗಳ ಪದೋನ್ನತಿ, ನಿವೃತ್ತಿ ಹಾಗೂ ಸೇವೆಯಲ್ಲಿರುವಾಗ ಅಕಾಲಿಕ ಮರಣಹೊಂದಿದ ಕಾರಣಗಳಿಂದ ಹುದ್ದೆಗಳು ಖಾಲಿ ಇರುತ್ತವೆ.</td></tr>
<tr><td>ಉಪನೋಂದಣಾಧಿಕಾರಿಗಳು</td><td rowspan="3">2023 ನೇ ಸಾಲಿನಿಂದ ಅಧಿಕಾರಿಗಳ ಪದೋನ್ನತಿ, ನಿವೃತ್ತಿ ಹಾಗೂ ಸೇವೆಯಲ್ಲಿರುವಾಗ ಅಕಾಲಿಕ ಮರಣಹೊಂದಿದ ಕಾರಣಗಳಿಂದ ಹುದ್ದೆಗಳು ಖಾಲಿ ಇರುತ್ತವೆ.</td></tr>
<tr><td>ಪ್ರಥಮ ದರ್ಜೆ ಸಹಾಯಕರು</td></tr>
<tr><td>ದ್ವಿತೀಯ ದರ್ಜೆ ಸಹಾಯಕರು</td></tr>
</table>

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು.

## ಅನುಬಂಧ-3

| ಹುದ್ದೆಯ ಹೆಸರು | ಹುದ್ದೆಗಳು ಖಾಲಿ ಇರುವ ಅವಧಿಯ ಮಾಹಿತಿ |
|---|---|
| ಜಿಲ್ಲಾನೋಂದಣಾಧಿಕಾರಿಗಳು | 2025 ನೇ ಸಾಲಿನಿಂದ ಮುಂಬಡ್ತಿ ಹುದ್ದೆಗಳು ಖಾಲಿ ಇರುತ್ತವೆ. |
| ಕೇಂದ್ರಸ್ಥಾನ ಸಹಾಯಕರು | 2025 ನೇ ಸಾಲಿನಿಂದ ಮುಂಬಡ್ತಿ ಹುದ್ದೆಗಳು ಖಾಲಿ ಇರುತ್ತವೆ. |
| ಹಿರಿಯ ಉಪನೋಂದಣಾಧಿಕಾರಿಗಳು | 2024 ನೇ ಸಾಲಿನಿಂದ ಅಧಿಕಾರಿಗಳ ಪದೋನ್ನತಿ, ನಿವೃತ್ತಿ ಹಾಗೂ ಸೇವೆಯಲ್ಲಿರುವಾಗ ಅಕಾಲಿಕ ಮರಣಹೊಂದಿದ ಕಾರಣಗಳಿಂದ ಮುಂಬಡ್ತಿ ಹುದ್ದೆಗಳು ಖಾಲಿ ಇರುತ್ತವೆ. |
| ಉಪನೋಂದಣಾಧಿಕಾರಿಗಳು<br>ಪ್ರಥಮ ದರ್ಜೆ ಸಹಾಯಕರು<br>ದ್ವಿತೀಯ ದರ್ಜೆ ಸಹಾಯಕರು | ಉಪನೋಂದಣಾಧಿಕಾರಿಗಳು ಹಾಗೂ ಪ್ರಥಮ ದರ್ಜೆ ಸಹಾಯಕರ ಮುಂಬಡ್ತಿ ಹುದ್ದೆಗಳು 2024 ನೇ ಸಾಲಿನಿಂದ ಪದೋನ್ನತಿ, ನಿವೃತ್ತಿ ಹಾಗೂ ಸೇವೆಯಲ್ಲಿರುವಾಗ ಅಕಾಲಿಕ ಮರಣಹೊಂದಿದ ಕಾರಣಗಳಿಂದ ಖಾಲಿ ಇರುತ್ತವೆ. ದ್ವಿತೀಯ ದರ್ಜೆ ಸಹಾಯಕ ಮುಂಬಡ್ತಿ ಹುದ್ದೆಗಳು 2008 ನೇ ಸಾಲಿನಿಂದ ಖಾಲಿ ಇದ್ದು, ಗ್ರೂಪ್-ಡಿ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿ ಹೊಂದಲು ಅರ್ಹತೆ ಇರದ ಕಾರಣ ಹಾಗೂ ಗ್ರೂಪ್-ಡಿ ಹುದ್ದೆಗಳ ನೇರ ನೇಮಕಾತಿ ಸ್ಥಗಿತಗೊಂಡ ಕಾರಣ ಮುಂಬಡ್ತಿ ಹುದ್ದೆಗಳು ಖಾಲಿ ಇರುತ್ತವೆ. |

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು.

EST-2-238-2025-26-LAQ